## ಅಧ್ಯಾತ್ಮ ನಾಯಕ



ದ್ವಿತೀಯ ಪಿಯುಸಿ ಓದುವಾಗ 'ಸಂವಾದ' ಪತ್ರಿಕೆಯಲ್ಲಿ ಕಮ್ಯುನಿಸಂ ಬಗ್ಗೆ ಓದುತ್ತಿದ್ದೆ. ಅದೇ ವೇಳೆಯಲ್ಲಿ ಅಂಬೇಡ್ಕರ್ ಸಹ ನನಗೆ ಅಲ್ಲಿ ಸಿಕ್ಕರು. ಆ ಮೇಲೆ ಅವರ ಪುಸ್ತಕಗಳನ್ನು ಓದಲು ಆರಂಭಿಸಿದೆ.

ಹೈಸ್ಕೂಲ್‌ನಲ್ಲಿ ಇದ್ದಾಗ ಹೊಸಮನಿ ಮಾಸ್ತರ್ ಎಂಬುವವರು ಸಮಾಜ ಸುಧಾರಕರ ಬಗ್ಗೆ ಪಾಠ ಮಾಡುತ್ತಿದ್ದರು. ಅಂಬೇಡ್ಕರ್ ಬಗ್ಗೆ ಅಲ್ಪಸ್ವಲ್ಪ ತಿಳಿಸಿದ್ದರು. ಒಮ್ಮೆ ಜ್ಯೋತಿ ಬಾ ಪುಲೆ ಬಗ್ಗೆ ಓದುವಾಗ ಅಂಬೇಡ್ಕರ್ ಅವರ ಮೇಲೆ ಪುಲೆ ಪ್ರಭಾವ ಬೀರಿದ್ದನ್ನು ತಿಳಿದೆ. ಹೀಗೆ ಅಂಬೇಡ್ಕರ್ ಬಗ್ಗೆ ಓದುತ್ತಾ ಹೋದಂತೆ ಅವರ ಶಕ್ತಿ ಮತ್ತು ಹೋರಾಟಗಳ ಅರಿವು ಸ್ಪಷ್ಟವಾಯಿತು.

ನಾನು ಓದುವ ಸಮಯದಲ್ಲಿ ನಮ್ಮ ಊರಲ್ಲಿ ಅಂಬೇಡ್ಕರ್ ಬಗ್ಗೆ ಯಾರಿಗೂ ಹೆಚ್ಚು ತಿಳಿದಿರಲಿಲ್ಲ ಎನಿಸುತ್ತದೆ. ನಮ್ಮಲ್ಲಿ ದಸಂಸ ಆಗಿನ್ನೂ ಆರಂಭ ಆಗಿರಲಿಲ್ಲ. ಅಂಬೇಡ್ಕರ್ ವಿಚಾರಗಳನ್ನು ಹಳ್ಳಿಗಳಿಗೆ ಮುಟ್ಟಿಸಬೇಕು ಎನಿಸಿತು. 'ಚೋಟಾ ಭೀಮ್'ನಂತೆ 'ಭಡಾ ಭೀಮ್' ಎಂದು ಮಕ್ಕಳಿಗಾಗಿಯೇ ಪುಸ್ತಕ ಬರೆಯಬೇಕು ಎನಿಸಿದೆ.

ಅಂಬೇಡ್ಕರ್ ಪ್ರಭಾವದ ಕುರಿತ ಒಂದು ಸನ್ನಿವೇಶವನ್ನು ಪತ್ರಿಕೆಯಲ್ಲಿ ಓದಿದ್ದೆ. ಒಂದು ಹಳ್ಳಿಯ ಮೇಲ್ಜಾತಿಯ ಮನೆಯ ಎದುರು ಒಬ್ಬ ಕ್ಷೌರದ ಅಂಗಡಿ ಇಟ್ಟುಕೊಂಡಿದ್ದ. ಬೆಳಿಗ್ಗೆ ಎದ್ದು ಆತನ ಮುಖ ನೋಡಿದರೆ ಕೆಟ್ಟದಾಗುತ್ತದೆ ಎನ್ನುವ ಕಾರಣಕ್ಕೆ ಆ ಮನೆಯವರು ಅಂಗಡಿಯನ್ನು ತಿರುಗಿಸುತ್ತಿದ್ದರು. ಈತ ಮರು ದಿನ ಬಂದು ಮತ್ತೆ ಅಂಗಡಿಯನ್ನು ಸರಿ ಮಾಡುತ್ತಿದ್ದ. ಹಲವು ದಿನ ಹೀಗೆಯೇ ನಡೆಯಿತು. ಕ್ಷೌರಿಕನಿಗೆ ಒಬ್ಬರು, 'ಅಂಬೇಡ್ಕರ್ ಫೋಟೊ ತಂದಿಡು' ಅಂದರು. ಫೋಟೊ ಇಟ್ಟು ಪೂಜೆ ಮಾಡಿದ. ಆ ಮನೆಯವರು ಅವನ ಸಹವಾಸಕ್ಕೆ ಬರಲಿಲ್ಲ. ಇದನ್ನು ಓದಿದ ನನಗೆ ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಎಂತಹ ಶಕ್ತಿ ಇದೆ ಎನಿಸಿತು.

ಅಂಬೇಡ್ಕರ್ ಅವರ ಭಾವಚಿತ್ರಗಳನ್ನು ಹಳ್ಳಿಗಳಲ್ಲಿ ಪೂಜೆ ಮಾಡುವರು. ಇದನ್ನು ವೈಚಾರಿಕರು ಒಪ್ಪುವುದಿಲ್ಲ. ಅಂಬೇಡ್ಕರ್ ಅವರನ್ನು ಬುದ್ಧ, ಬಸವಣ್ಣ ಅವರಂತೆ ಒಬ್ಬ ಅಧ್ಯಾತ್ಮ ನಾಯಕನಾಗಿಯೂ ನೋಡಬೇಕು. ನಾನು ಅವರನ್ನು ಅಧ್ಯಾತ್ಮ ನಾಯಕರಾಗಿಯೂ ನೋಡುವೆ.

—ಮಹದೇವ ಹಡಪದ್,
ರಂಗಕರ್ಮಿ, ಧಾರವಾಡ

## ಹೆಸರಲ್ಲ, ಉಸಿರು...



ಸಮಸಮಾಜದ ಕನಸು, ಕಲ್ಪನೆ ಸಾಕಾರಗೊಳ್ಳದೇ ಇರಲು ತೊಡಕಾಗಿರುವುದು ಲಿಂಗಭೇದ ಮತ್ತು ಜಾತಿಭೇದ. ಹೆಣ್ಣಾಗಿ ಹುಟ್ಟಿ ಲಿಂಗಭೇದದ ಅನುಭವ ಮತ್ತು ಅರಿವು ಎರಡೂ ದಕ್ಕಿದೆ. ನಮ್ಮಲ್ಲಿ ಮಧ್ಯಮ ವರ್ಗ ಇರುವಂತೆಯೇ ಮಧ್ಯಮ ಜಾತಿಗಳೂ ಇವೆ. ಅಂತಹ ಪರಿಸರದಲ್ಲಿ ಹುಟ್ಟಿ ಬೆಳೆದ ನನ್ನಂತಹವರಿಗೆ ಅಂಬೇಡ್ಕರ್ ತಲುಪಿದ್ದು ಬಹಳ ತಡವಾಗಿ. ಇನ್ನೂ ತಲುಪದವರೂ ಇದ್ದಾರೆ.

ಶಾಲಾ ದಿನಗಳಲ್ಲಿ ಮೀಸಲಾತಿ ವಿರೋಧಿಸುವ ಗುಂಪಿಗೆ ನಾನು ಕೂಡ ಸೇರಿದ್ದೆ. ಕಾಲಕ್ರಮೇಣ ಓದು ಮತ್ತು ಅನುಭವಗಳು ಅರಿವನ್ನು ವಿಸ್ತರಿಸಿದಂತೆ ಸ್ತ್ರೀವಾದದ ತತ್ವ ಸಿದ್ಧಾಂತಗಳು ನನ್ನ ವ್ಯಕ್ತಿತ್ವ ರೂಪಿಸಿಕೊಳ್ಳುವುದರಲ್ಲಿ ಬಹುಮುಖ್ಯ ಪಾತ್ರ ವಹಿಸಿದವು. ನಿಜವಾಗಿ ಶೋಷಣೆ ಅನುಭವಿಸಿಯೂ ಅದನ್ನು ಪರರು ನಂಬುವಂತೆ ಮಾಡುವುದು ಅಸಾಧ್ಯ. ಶೋಷಣೆಯ ಪದರಪದರಗಳನ್ನು ಬಿಡಿಸಿ ಅರ್ಥಮಾಡಿಸುವುದು ಎಷ್ಟು ಕಷ್ಟ ಎನ್ನುವುದು ಗೊತ್ತಾಗುತ್ತಿತ್ತು. ಸ್ವತಃ ಅನುಭವಿಸದೆ ಇರುವುದನ್ನು ಬಹಳ ಜನ ಒಪ್ಪಿಕೊಳ್ಳುವುದೇ ಇಲ್ಲ. ಅಂತಹುದೇ ಒಂದು ಗಳಿಗೆಯಲ್ಲಿ ನನಗೆ ಜಾತೀಯತೆ ಮತ್ತು ಅಸ್ಪೃಶ್ಯತೆಗಳೂ ಕೂಡ ಹೀಗೆ ಅಲ್ಲವೆ ಎಂಬ ಜ್ಞಾನೋದಯವಾಯಿತು. ಅಂದಿನಿಂದ ಜಾತಿವ್ಯವಸ್ಥೆ, ಸಂವಿಧಾನ, ಮೀಸಲಾತಿ ಇವೆಲ್ಲದರ ಬಗೆಗಿನ ನನ್ನ ಮನೋಭಾವ ಬದಲಾಯಿತು. ಇಡೀ ಜಗತ್ತನ್ನೇ ಪ್ರಭಾವಿಸಿ ಇಂತಹ ವ್ಯವಸ್ಥೆಯನ್ನು ಸರಿದಾರಿಗೆ ತರಲು ಯತ್ನಿಸಿದ ಅಂಬೇಡ್ಕರ್ ಗೋಡೆಯ ಮೇಲಿನ ಭಾವಚಿತ್ರದಿಂದ ಹೊರಬಂದು ಮನಸ್ಸನ್ನು ಮುಟ್ಟಿದ್ದು ಹೀಗೆ.

ಮಗದೊಮ್ಮೆ ಹಲವು ವರ್ಷಗಳ ವೈಯಕ್ತಿಕ ಹೋರಾಟವೊಂದು ಅಂತ್ಯ ಕಂಡಿದ್ದು ಕಾನೂನಾತ್ಮಕವಾಗಿ. ಸಮಸ್ಯೆಗೆ ಪರಿಹಾರ ದೊರಕುವುದರೊಂದಿಗೆ ಆ ಘಟನೆ ನನ್ನನ್ನು ಅಭದ್ರತೆಯಿಂದ ಪಾರುಮಾಡಿ, ಆರ್ಥಿಕವಾಗಿ ಸಬಲಳನ್ನಾಗಿಸಿ ಆತ್ಮಸ್ಥೈರ್ಯ ತುಂಬಿತು. ಮತ್ತೆ ಹೊಸದಾಗಿ ಬದುಕು ಕಟ್ಟಿಕೊಳ್ಳಲು ಅನುವು ಮಾಡಿಕೊಟ್ಟಿದ್ದು ಇದೇ ಸಂವಿಧಾನ. ಇದೇ ಕಾನೂನು. ಇದೇ ಮಹಿಳಾ ಸಮಾನತೆಯ ಹಕ್ಕುಗಳು. ಅಂಬೇಡ್ಕರ್ ಮತ್ತೊಮ್ಮೆ ನನ್ನನ್ನು ತಟ್ಟಿದ್ದು ಹೀಗೆ. ಅಂದಿನಿಂದ ಅಂಬೇಡ್ಕರ್ ನನ್ನ ಅಧ್ಯಯನ ಮತ್ತು ಬದುಕಿನ ಅವಿಭಾಜ್ಯ ಅಂಗವಾದರು. ಅಂಬೇಡ್ಕರ್ ಇಂದು ಕೇವಲ ಹೆಸರಲ್ಲ, ಬಹುಜನರ ಉಸಿರು.

—ಕಾವ್ಯಶ್ರೀ ಎಚ್.
ಕವಯಿತ್ರಿ, ಬೆಂಗಳೂರು

## ಸಮುದಾಯಪ್ರಜ್ಞೆಯ ಪಾಠ



ಅಂಬೇಡ್ಕರ್ ಅವರ ಎರಡು ಆಶಯಗಳು ನನ್ನ ಪ್ರಜ್ಞೆಯ ಭಾಗವಾಗಿ ನೆಲೆಯೂರಿವೆ. ವ್ಯಕ್ತಿಪೂಜೆಯ ಅಪಾಯಗಳನ್ನು ಮನಗಂಡಿದ್ದ ಅವರು, ಯಾವುದು ಘಟಿಸಬಾರದೆಂದು ಆಶಿಸಿದ್ದರೋ ಅದು ನಡೆದು, ಇಂದು ಎಲ್ಲವನ್ನೂ ಆಪೋಶನ ತೆಗೆದುಕೊಂಡು ಮುನ್ನುಗ್ಗುತ್ತಿದೆ. ಅಂಬೇಡ್ಕರ್ ಆಡಿದ 'ಪ್ರಜಾಪ್ರಭುತ್ವ ನೀಡಿದ ಹಕ್ಕುಗಳನ್ನು ದೇಶದ ಜನ ಯಾವ ಕಾರಣಕ್ಕೂ ಒಬ್ಬ ವ್ಯಕ್ತಿಗೆ ನೀಡಕೂಡದು. ಆ ವ್ಯಕ್ತಿಯ ಬಗೆಗೆ ನಮಗೆಷ್ಟೇ ಗೌರವ ಇರಲಿ, ನಮ್ಮ ಸಂವಿಧಾನಬದ್ಧ ಹಕ್ಕುಗಳನ್ನು ಅವರ ಪಾದಕ್ಕೆ ಅರ್ಪಿಸಬಾರದು. ರಾಜಕೀಯದಲ್ಲಿ ವ್ಯಕ್ತಿಪೂಜೆಗೆ ಅವಕಾಶ ಇರಕೂಡದು. ಅದು ಬಂದದ್ದೇ ಆದಲ್ಲಿ ಪ್ರಜಾಪ್ರಭುತ್ವ ಅರ್ಥಹೀನವಾಗುತ್ತದೆ' ಎಂಬ ಮಾತನ್ನು ನಾವು ಈಗಲಾದರೂ ಮನದಟ್ಟು ಮಾಡಿಕೊಳ್ಳದೆ ಹೋದಲ್ಲಿ, ಅದರ ಗಂಭೀರ ಪರಿಣಾಮವನ್ನು ಮುಂಬರುವ ದಿನಗಳಲ್ಲಿ ಎದುರಿಸಬೇಕಾಗುತ್ತದೆ.

ಕಡೆಯ ದಿನಗಳಲ್ಲಿ ತಮ್ಮ ಆಪ್ತ ಸಹಾಯಕ ನಾನಕ್ ಚಂದ್ ರತ್ತು ಅವರ ಬಳಿ ಅಂಬೇಡ್ಕರ್ ಅವರು ಹೇಳಿದ 'ಎಷ್ಟೆಷ್ಟೋ ಕಷ್ಟ, ಅಡೆತಡೆಗಳ ಹೊರತಾಗಿಯೂ ನಾನು ಹೋರಾಟದ ಕ್ಯಾರವಾನ್ ಅನ್ನು ಇಲ್ಲಿಯ ತನಕ ಎಳೆದು ತಂದು ನಿಲ್ಲಿಸಿರುವೆ. ಅದು ಮುಂದೆ ಸಾಗಬೇಕು. ನನ್ನ ಉತ್ತರಾಧಿಕಾರಿಗಳು ಈ ಕ್ಯಾರವಾನನ್ನು ಮುಂದೆ ತೆಗೆದುಕೊಂಡು ಹೋಗಲು ಸಾಧ್ಯವಾಗದಿದ್ದರೂ ಅಡ್ಡಿಯಿಲ್ಲ, ಅದನ್ನು ಇದ್ದಲ್ಲಿಯೇ ನಿಲ್ಲಿಸಬೇಕೆ ಹೊರತು ಹಿಂದೆಳೆಯಬಾರದು. ಇದು ನನ್ನ ಕೊನೆಯ ಪ್ರಾರ್ಥನೆ' ಎಂಬ ಮಾತು ಕೂಡ ಇರಿಯುತ್ತಲೇ ಇರುತ್ತದೆ.

ವ್ಯಕ್ತಿಪೂಜೆಯನ್ನು ತಿರಸ್ಕರಿಸಬೇಕಿರುವ ಅಗತ್ಯ ಮತ್ತು ತುಳಿತಕ್ಕೊಳಗಾಗುವ ಸಮುದಾಯಗಳು ಅಳವಡಿಸಿಕೊಳ್ಳಬೇಕಿರುವ ಸಮುದಾಯ ಪ್ರಜ್ಞೆ ಹೇಗಿರಬೇಕೆಂಬುದನ್ನು ಅಂಬೇಡ್ಕರ್ ಅವರಂತೆ ಪರಿಣಾಮಕಾರಿಯಾಗಿ ನನಗೆ ಇನ್ಯಾರೂ ಮನದಟ್ಟು ಮಾಡಿಕೊಟ್ಟಿಲ್ಲ.

—ಎಚ್.ಕೆ. ಶರತ್,
ಉಪನ್ಯಾಸಕ, ಹಾಸನ